# ‘ಸಕ್ಕರೆ’ಯ ಗುಂಗು

ದೀಪಾ ಸನ್ನಿಧಿ ರೊಮ್ಯಾಂಟಿಕ್ ಮೂಡ್‌ನಲ್ಲಿದ್ದರು. ಹೇಳಿ ಕೇಳಿ ಅದು ರೊಮ್ಯಾಂಟಿಕ್ ಹಾಡು. ನಾಯಕ ನಾಯಕಿಯ ನಡುವೆ ಬೆಚ್ಚನೆ ಭಾವಗಳು ಅದಲು ಬದಲಾಗುವ ಸಂದರ್ಭ. ‘ಸಕ್ಕರೆ’ ಚಿತ್ರದ ಹಾಡಿನ ಚಿತ್ರೀಕರಣದ ನಡುವೆ ಸುದ್ದಿಗಾರರೊಂದಿಗೆ ಮಾತಿಗೆ ಕೂತ ದೀಪಾ ಅವರ ಮಾತುಗಳಲ್ಲೂ ಅದೇ ಬಿಸುಪು.

‘ಸಕ್ಕರೆ’ಯಂಥ ಗೀತೆಗಾಗಿ ಕಲಾ ನಿರ್ದೇಶಕ ಶಶಿಧರ ಅಡಪ ಮೋಹಕವಾದ ಸೆಟ್ ರೂಪಿಸಿದ್ದರು. ‘ಹಾಡು ಮತ್ತು ಸೆಟ್ ಎರಡೂ ಸೂಪರ್’ ಎಂದರು ದೀಪಾ. ಇಡೀ ಚಿತ್ರವೇ ಅವರಿಗೆ ಸಕ್ಕರೆ ಸವಿಯ ಅನುಭವ ನೀಡಿದೆಯಂತೆ. ಗಣೇಶ್ ಜೊತೆ ನಟಿಸಬೇಕು ಎನ್ನುವ ಅವರ ಕನಸು ಈ ಚಿತ್ರದ ಮೂಲಕ ನನಸಾಗಿದೆ. ಕಳೆದ ಮೂರು ಸಿನಿಮಾಗಳಿಗಿಂತಲೂ ಭಿನ್ನವಾದ, ಭಾವನಾತ್ಮಕ ಗ್ರಾಫ್‌ನಲ್ಲಿ ಸಾಕಷ್ಟು ಏರಿಳಿತ ಇರುವ ಪಾತ್ರ ಅವರದಂತೆ. ಹಾಗಾಗಿಯೇ ‘ಸಕ್ಕರೆ’ ಅವರಿಗೆ ಸಿಹಿ ಸಿಹಿ ಅನ್ನಿಸಿದೆ.

ನಾಯಕ ನಟ ಗಣೇಶ್‌ಗೂ ‘ಸಕ್ಕರೆ’ ರಸವತ್ತೆನ್ನಿಸಿದೆ. ‘ಇದೊಂದು ಪೂರ್ಣ ಪ್ರಮಾಣದ ರೊಮ್ಯಾಂಟಿಕ್ ಸಿನಿಮಾ’ ಎನ್ನುವುದು ಅವರ ಬಣ್ಣನೆ. ಅಂದ ಹಾಗೆ, ನಾಯಕ–ನಾಯಕಿ ಇಬ್ಬರೂ ನಿರ್ದೇಶಕ ಅಭಯಸಿಂಹ ಅವರ ಚಿತ್ರಕಥೆ ಮತ್ತು ನಿರೂಪಣಾ ಶೈಲಿಯನ್ನು ಒಕ್ಕೊರಲಿನಿಂದ ಮೆಚ್ಚಿಕೊಂಡರು.





## ‘ಮೈನಾ’ ಶತಕ

‘ಮೈನಾ’ ಚಿತ್ರ ಶತದಿನ ಪೂರೈಸಿದೆ– ಚಿತ್ರೀಕರಣದಲ್ಲಿ!

ನಿರ್ದೇಶಕ ನಾಗಶೇಖರ್ ಅವರಿಗೆ ನೂರರ ವಿಶೇಷ ಹೊಸತೇನಲ್ಲ. ಅವರ ಹಿಂದಿನ ಚಿತ್ರಗಳಾದ ‘ಅರಮನೆ’ ಮತ್ತು ‘ಸಂಜು ವೆಡ್ಸ್ ಗೀತಾ’ ನೂರು ದಿನಗಳ ಪ್ರದರ್ಶನ ಕಂಡಿದ್ದವು. ಇವೆರಡನ್ನೂ ಮೀರಿ ‘ಮೈನಾ’ ಹೊಸ ದಾಖಲೆ ಬರೆಯಲಿದೆ ಎನ್ನುವುದು ನಾಗಶೇಖರ್ ವಿಶ್ವಾಸ. ‘ಮೈನಾ’ಕ್ಕೆ ನೂರು ದಿನಗಳ ಕಾಲ ಚಿತ್ರೀಕರಣ ನಡೆಸಿದ ಖುಷಿಯಲ್ಲಿದ್ದ ನಾಗಶೇಖರ್, ‘ಸಂಜು ವೆಡ್ಸ್ ಗೀತಾ ಚಿತ್ರಕ್ಕಿಂತಲೂ ದೊಡ್ಡ ಹಿಟ್ ನಿರೀಕ್ಷೆಯಲ್ಲಿರುವೆ’ ಎಂದರು. ಡಿಸೆಂಬರ್ ಎರಡನೇ ವಾರದಲ್ಲಿ ಗೀತೆಗಳ ಧ್ವನಿಸುರುಳಿ ಬಿಡುಗಡೆ ಮಾಡುವ ಉದ್ದೇಶ ಅವರದು.

ಬೆಂಗಳೂರು, ಚೆನ್ನೈ, ಮರವಂತೆ, ಕ್ಯಾಸಲ್ ರಾಕ್, ದೂಧ್‌ಸಾಗರ್ ಸೇರಿದಂತೆ ಅನೇಕ ರಮ್ಯ ತಾಣಗಳಲ್ಲಿ ‘ಮೈನಾ’ ಚಿತ್ರೀಕರಣ ನಡೆಸಲಾಗಿದೆಯಂತೆ. ಕೆಲವು ದುರ್ಗಮ ಸಂದರ್ಭಗಳಲ್ಲಿ ಚಿತ್ರೀಕರಣಕ್ಕಾಗಿ ಹೆಲಿಕ್ಯಾಪ್ಟರ್ ಬಳಸಿದ ಸಂದರ್ಭವನ್ನು ಛಾಯಾಗ್ರಾಹಕ ಸತ್ಯ ಹೆಗಡೆ ನೆನಪಿಸಿಕೊಂಡರು.

ನಾಯಕ ನಟ ಚೇತನ್ ಅವರಿಗೆ ‘ಮೈನಾ’ ಭರವಸೆಯ ಹೊಂಗಿರಣವಾಗಿ ಕಂಡಿದೆ. ನಾಗಶೇಖರ್ ಅವರೊಂದಿಗಿನ ಕೆಲಸ ಅವರ ಪಾಲಿಗೆ ಕಲಿಕೆಯಾಗಿ, ಸವಿ ನೆನಪಾಗಿ ಪರಿಣಮಿಸಿದೆಯಂತೆ.

## ಮರಳಿ ಬಂದರು ಗೀತಾ!

ರಾಜಕುಮಾರ್, ವಿಷ್ಣುವರ್ಧನ್, ಅಂಬರೀಷ್, ಅನಂತನಾಗ್ ಅವರಂಥ ಹಿರಿಯ ನಟರೊಂದಿಗೆ ನಟಿಸಿರುವ ದಕ್ಷಿಣ ಭಾರತದ ಜನಪ್ರಿಯ ತಾರೆ ಗೀತಾ ಮದುವೆಯ ನಂತರ ಚಿತ್ರರಂಗದಿಂದ ಕಣ್ಮರೆಯಾಗಿದ್ದರು. ಪತಿಯೊಂದಿಗೆ ಅಮೆರಿಕಾದಲ್ಲಿ ನೆಲೆಸಿರುವ ಗೀತಾ, ಇದೀಗ ‘ಮೀನಾಕ್ಷಿ’ ಮೂಲಕ ಕನ್ನಡ ಚಿತ್ರರಂಗಕ್ಕೆ ಮರಳಿದ್ದಾರೆ.

‘ಎಡಕಲ್ಲು ಗುಡ್ಡ..’ದ ಚಂದ್ರಶೇಖರ್ ನಿರ್ದೇಶನದ ‘ಪೂರ್ವಾಪರ’ ಚಿತ್ರದ ನಂತರ ಗೀತಾ ಅವರು ನಟಿಸುತ್ತಿರುವ ಚಿತ್ರವಿದು. ಶ್ರೀಧರ್ ನಿರ್ದೇಶನದ ‘ಮೀನಾಕ್ಷಿ’ ಅಸೈನ್‌ಮೆಂಟ್ ಮೇರೆಗೇ ಗೀತಾ ಮೇಡಂ ಬೆಂಗಳೂರಿಗೆ ಬಂದಿದ್ದಾರೆ. ಅಮೆರಿಕಾಗೆ ವಾಪಸ್ ಆಗುವ ಮುನ್ನ ತೆಲುಗು ಚಿತ್ರವೊಂದರಲ್ಲಿ ಕೂಡ ಅವರು ನಟಿಸಲಿದ್ದಾರೆ.



‘ಅಮೆರಿಕದಲ್ಲಿ ಭಾರತೀಯ ಚಿತ್ರಗಳಿಗೆ ದೊಡ್ಡ ಮಾರುಕಟ್ಟೆಯಿದೆ. ಆದರೆ, ತಮಿಳು, ತೆಲುಗು ಮತ್ತು ಮಲಯಾಳಂ ಚಿತ್ರಗಳು ಸುಲಭವಾಗಿ ದೊರೆಯುವಂತೆ ಕನ್ನಡ ಸಿನಿಮಾಗಳು ವೀಕ್ಷಕರಿಗೆ ಲಭ್ಯವಿಲ್ಲ. ಈ ನಿಟ್ಟನಲ್ಲಿ ಕನ್ನಡ ಚಿತ್ರರಂಗ ಗಮನ ಹರಿಸಬೇಕಿದೆ’ ಎನ್ನುವ ಅವರ ಮಾತುಗಳಲ್ಲಿ ಕನ್ನಡ ಸಿನಿಮಾ ಕುರಿತ ಕಾಳಜಿ ಎದ್ದು ಕಾಣುತ್ತಿತ್ತು. ಅಂದ ಹಾಗೆ, ಮೀನಾಕ್ಷಿ ಚಿತ್ರದಲ್ಲಿ ಅವರದು ನ್ಯಾಯಾಧೀಶೆ ಪಾತ್ರ. ಶುಭಾ ಪೂಂಜ, ರಘು ಮುಖರ್ಜಿ ಪ್ರಧಾನ ಪಾತ್ರಗಳಲ್ಲಿದ್ದಾರೆ.

■ ರಘು